**ದಿನಾಂಕ 10-08-2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಎಂ ಎಂ ಕೆ ವಕೀಲರಿಂದಃ**

1. ನನಗೆ ಓದಲು ಬರೆಯಲು ಬರುವುದಿಲ್ಲ. ವ್ಯವಹಾರ ಆಗುವ ಪೂರ್ವದಲ್ಲಿ ಪ್ರತಿವಾದಿಯ ಮನೆಗೆ ಹೋಗಿ ನಾನು ಮಾತನಾಡಿರುವುದಿಲ್ಲ. ಪ್ರತಿವಾದಿಯರ ಹೆಂಡತಿ ಮಕ್ಕಳಿಗೆ ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ವಿಚಾರ ಮಾಡಿರುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಪ್ರತಿವಾದಿಯ ಇಬ್ಬರು ಮಕ್ಕಳು ವಯಸ್ಕರು ಇದ್ದರು ಎಂದರೆ ಸರಿ. ವಯಸ್ಕಳ ಮಕ್ಕಳಾಗಿದ್ದಕ್ಕೆ ಆಸ್ತಿಯ ಮರಾಟದ ವಿಷಯವನ್ನು ಮಾತನಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಹೋಗಿ ನೋಡಿರುತ್ತೇನೆ. ದಾವಾ ಆಸ್ತಿಯನ್ನು ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಏನು ಇರುತ್ತದೆ ಎಂದರೆ ಈಗ ಸಧ್ಯ ನೋಡಿರುವುದಿಲ್ಲ. ದಾವಾ ಆಸ್ತಿಯ ಸುತ್ತಲು ವ್ಯವಸಾಯ ಭೂಮಿ ಇರುತ್ತದೆ ಎಂದರೆ ಸರಿ. ಅಲ್ಲಿ ಯಾವುದೆ

ಮನೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಮನೆಗಳು ಆಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿಯು ತಾನು ಜಮೀನು ಮಾರಾಟ ಮಾಡುವುದಿದೆ ಎಂದು ಬಂದು ಹೇಳಿಲ್ಲ ಎಂದರೆ ಸರಿ. ನನ್ನ ಮತ್ತು ವಾದಿಯ ನಡುವೆ ಯಾವುದೆ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ವ್ಯವಹರದ ಹಣವನ್ನು ನಮ್ಮ ವಕೀಲರ ಕಡೆ ಕೊಟ್ಟಿರುತ್ತೇನೆ. ಆ ಹಣವನ್ನು ಪ್ರತಿವಾದಿಗೆ ಕೊಟ್ಟಿರುತ್ತಾರೂ ಇಲ್ಲವೂ ನನಗೆ ಗೊತ್ತಿಲ್ಲ. ಖರೀದಿಯ 2,80,000/- ಹಣವನ್ನು ನಾನು ಪ್ರತಿವಾದಿಗೆ ಕೊಟ್ಟಿರುವುದಿಲ್ಲ. ನಾನು ಪ್ರತಿವಾದಿಯ ಜೊತೆಗೆ ಖರೀದಿ ವ್ಯವಹಾರದ ಮಾತುಕತೆ ಮಾಡಿಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರದ ಬಗ್ಗೆ ನನಗೂ ಮತ್ತು ಪ್ರತಿವಾದಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರ ಆದ ಮೇಲೆ ನಾನು ಇಲ್ಲಿಯವರೆಗೆ ಪ್ರತಿವಾದಿಗೆ ಭೇಟಿ ಆಗಿರುವುದಿಲ್ಲ ಎಂದರೆ ಸರಿ. ದಾವೆ ಹಾಕುವ ಪೂರ್ವದಲ್ಲಿ ಪ್ರತಿವಾದಿಗೆ ನೋಟೀಸ ಕೊಟ್ಟ ಬಗ್ಗೆ ನಾನು ವಿಚಾರ ಮಾಡಿ ಹೇಳಬೇಕಾಗುತ್ತದೆ. ಪ್ರತಿವಾದಿಯು ನಾನು ತಯಾರಿಸಿಕೊಂಡ ಖರೀದಿ ಕರಾರು ಪತ್ರ ಖೊಟ್ಟಿ ಕಾಗದ ಪತ್ರ ಇದೆ ಎಂದು ಪ್ರತ್ಯುತ್ತರ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರ ಬಗ್ಗೆ ನನಗೆ ಮಾಹಿತಿ ಇದೆ. ಅದಕ್ಕೆ ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಮ್ಮ ವಕೀಲರು ಸಹಿ ಮಾಡಲು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ.

3. ನನ್ನ ನೋಟೀಸನಲ್ಲಿ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾಣೆಯ ಪ್ರಮಾಣ ಪತ್ರದಲ್ಲಿ ನಾನು ಮಮ್ಮನಗಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಗೆ ಮನೆಯ ಅಡಚಣೆ ಇತ್ತು ಎಂದು ನಾನ ವಿಚಾರಿಸಿಲ್ಲ ಎಂದರೆ ಸರಿ. ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೆ. ಸರಿ ಇದೆ.** **ನನ್ನ ಸಮಕ್ಷಮ**

ಪ್ರಧಾನ **ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.**